ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೇ, ಅಧಿಕಾರಿಗಳ ಮೇಲೆ ಹಸ್ತಕ್ಷೇಪ ಮಾಡಲಿಕ್ಕೆ ಹೊರಟ್ಟಿದ್ದಾರೆ ಉಸ್ತುವಾರಿ ಮಂತ್ರಿಗಳು. 10 ದಿವಸಗಳ ಕಾಲ ಅಧಿಕಾರಿಗಳು ಶಾಸಕರ ಜೊತೆಯಲ್ಲಿ ಕೆಸ ಮಾಡಬೇಕೆಂದು ಇದ್ದರೂ ಕೂಡ ಅದನ್ನು ಮಾಡಬಾರದೆಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ನಾನು ನಿಮಗೆ ಹೇಳಿದೆ ಕನ್ನಡವನ್ನು ನಿಧಾನವಾಗಿ ಮಾತನಾಡಿ ಎಂದು.

ಶ್ರೀ ವಿ. ಮಾರುತಿರಾವ್ ಪವಾರ್ : ಸನ್ಮಾನ್ಯ ಅಧ್ಯಕ್ಷರೇ, ಕಳೆದ ಅಧಿವೇಶನದ ಸಂದರ್ಭದಲ್ಲಿ ನಮ್ಮ ಕೆ. ಎಸ್. ಈಶ್ವರಪ್ಪನವರು ಈ ವಿಚಾರವನ್ನು ಎತ್ತಿದ್ದಾಗ ಸನ್ಮಾನ್ಯ ಮುಖ್ಯ ಮಂತ್ರಿಗಳೇ ಹೇಳಿದ್ದಾರೆ.

ಅಧ್ಯಕ್ಷರು : ಜಿಲ್ಲಾ ಪಂಚಾಯ್ತಿತಿ ಛೇರ್ಮನ್ನರ ಅಧ್ಯಕ್ಷತೆ, ಜಿಲ್ಲಾ ಮಂತ್ರಿಗಳು ಅಲ್ಲಿ ಬಾವುಟವನ್ನು ಹಾರಿಸುತ್ತಾರೆ, ಇವರ ಹೆಸರುಗನ್ನು ಆ ಆಹ್ವಾನ ಪತ್ರಿಕೆಯಲ್ಲಿ ಸೇರಿಸಿರುವುದಿಲ್ಲ, ಉದ್ದೇಶ ಪೂರ್ವಕವಾಗಿ ನಮ್ಮನ್ನು ಕಡೆಗಣಿಸಿದ್ದಾರೆ ಎನ್ನುವುದು ಅವರ ಪಾದ. ನಾವೆಲ್ಲ ಸಿಟಿಯಿಂದ ಆಯ್ಕೆಯಾಗಿರುವಂತಹ ಶಾಸಕರು ಎಂದು. Looking at this invitation, I think there is some truth in what they say. I think the proper authority should be...

ಶ್ರೀ ಹೆಚ್. ಡಿ. ದೇವೇಗೌಡ : ಜಿಲ್ಲಾ ಪಂಚಾಯಿತಿಯ ಅಧ್ಯಕ್ಷರು ಇದರೊಳಗೆ ಇಲ್ಲ ಸರ್, ಇನ್ನು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಇದನ್ನು ಕೊಡುತ್ತಾರೆ.

ಅಧ್ಯಕ್ಷರು : ಅದರಲ್ಲಿ, ಇದರಲ್ಲಿ ಎಲ್ಲಿಯೂ ಇಲ್ಲ ಅವರನ್ನು ಬಿಟ್ಟು ಬಿಟ್ಟಿದ್ದಾರೆ ಅವರ ಹೆಸರನ್ನು ಪ್ರಿಂಟಾಡಿಲ್ಲ, ನಮ್ಮನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ, ಎನ್ನುವುದು ಅವರ ಅಳಲು. ಶಾಸಕರಾಗಿ ಆಯ್ಕೆಯಾದ ಮೇಲೆ ಅವರನ್ನು ಎಲ್ಲಿಯಾದರೂ ಒಂದು ಕಡೆ ಸೇರುಸಬೇಕಲ್ಲ.

ಶ್ರೀ ಹೆಚ್.ಡಿ. ದೇವೇಗೌಡ : ಬಾವುಟ ಹಾರಿಸುವುದರಲ್ಲಿ ಯಾರ ಹೆಸರನ್ನು.. ಜಿಲ್ಲಾ ಅಧ್ಯಕ್ಷರು ಹೆಸರು ಇಲ್ಲ, ಸಾಂಸ್ಕೃತಿಕ ಕಾರ್ಯಕ್ರಮದ ವಿಷಯವನ್ನು ಹೇಳುತ್ತಿದ್ದೀರಿ, ಸಾಂಸ್ಕೃತಿಕ ಕಾರ್ಯಕ್ರಮದ ವಿಷಯದಲ್ಲಿ ನಾನು ಸಂಬಂಧಪಟ್ಟಂತಹ ಜಿಲ್ಲಾಧಿಕಾರಿಗಳಿಂದ ವಿಷಯವನ್ನು ತರಿಸುತ್ತೇನೆ. ಸಾಮಾನ್ಯವಾಗಿ ಯಾವ ಶಾಸಕರ ಹೆಸರನ್ನು ಹಾಕುವುದಿಲ್ಲ, ನಾವು ಪ್ರಯತ್ನ ಮಾಡಿದ್ದೇವೆ, ಅದು ಗವರ್ನಮೆಂಟ್ ಆಫ್ ಇಂಡಿಯಾ ಫ್ಲಾಗ್ ಕೋಡ್ ಅಂಡ್ ರೂಲ್ಸ್ ಅಡ್ಡ ಬಂತು ಎಂದು ಹೇಳಿ....

ಶ್ರೀ ಹೆಚ್.ಡಿ. ಬಸವರಾಜ್ : ಫ್ಲಾಗ್ ಹಾರಿಸುವುದು ನಮ್ಮ ಹಕ್ಕು, ಆ ಹಕ್ಕನ್ನು ಮೊಟಕು ಮಾಡಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ : ಫ್ಲಾಗ್ ಹಾಯಿಸ್ಟಿಂಗ್ ಹಕ್ಕಲ್ಲ, ಹಾಕುವುದಕ್ಕೆ ಬರುವುದಿಲ್ಲ, ಅವರು ಆಹ್ವಾನ ಪತ್ರಿಕೆಯನ್ನು ಕಳುಹಿಸಿಲ್ಲವೆಂದು ಹೇಳಲಿಲ್ಲ, if it is not sent, definitely it will be a lapse.

ಈಗಲೇ ವಿಚಾರ ಮಾಡುತ್ತೇನೆ. I Willcome back to the House.

(ಉ) ಮಾಜಿ ಮಂತ್ರಿ ಸಾಗರವಳ್ಳಿ ರೇವಣ್ಣನವರನ್ನು ಜೈಲಿನಿಂದ ಬಿಡುಗಡೆ ಮಾಡುವ ಬಗ್ಗೆ

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸನ್ಮಾನ್ಯ ಅಧ್ಯಕ್ಷರೇ, ಸಾಗರವಳ್ಳಿ ರೇವಣ್ಣ ಎಂಬುವರು ಬಹಳ ಹಳೆಯ ಸದಸ್ಯರು, ಹಾಗೂ ಮಾಜಿ ಬಂದೀಖಾನೆ

ಮಂತ್ರಿಯಾಗಿದ್ದರು, ಕೃಷಿ ಮಂತ್ರಿಯಾಗಿದ್ದರು, ಕೆಲವೊಂದು ಘಟನೆಯಾಗಿ ಇವತ್ತು ಅವರು ಜೈಲಿನಲ್ಲಿದ್ದಾರೆ. ಪಾಪ ಅವರಿಗೆ ವಯಸ್ಸಾಗಿದೆ, ತೊಂದರೆಯಾಗುತ್ತದೆ, ಅವರನ್ನು ಬಿಡಿಸಬೇಕೆಂದು...

ಅಧ್ಯಕ್ಷರು : ಬಿಡುಗಡೆ ಮಾಡಿದ್ದಾರೆಂತಲ್ಲಾ ಬಿಡಿ, ಇನ್ನು ಏನು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಇನ್ನು ಬಿಡುಗಡೆ ಮಾಡಿಲ್ಲ. ಅದಕ್ಕೆ ದಯವಿಟ್ಟು ಬಿಡುಗಡೆ ಮಾಡಿ, ಬಿಡುಗಡೆಯಾಗದೇ ಹೆಚ್ಚು ಕಡಿಮೆಯಾದರೆ ಪಾಪ. ಅವರು ಮಾಜಿ ಮಂತ್ರಿಯಾಗಿದ್ದಾರೆ ಅವರನ್ನು ಬಿಡುಗಡೆ ಮಾಡಿ.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ಸಾಗರವಳ್ಳಿ ರೇವಣ್ಣನವರ ಮೇಲೆ ಶ್ರೀ ಗುರುಪಾದಪ್ಪ ನಾಗಮಾರಪಲ್ಲಿಯವರಿಗೆ ಎಷ್ಟು ಅನುಕಂಪವಿದೆಯೋ ಅಷ್ಟೇ ಅನುಕಂಪ ನಮಗೂ ಇದೆ. ಆದರೆ ಅವರು ಹೇಳತಕ್ಕಂತಹ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಇಲ್ಲಿ ಬಂದಿರುವ ಸಮಸ್ಯೆ ಏನೆಂದರೆ ಈಗಾಗಲೇ 5 ವರ್ಷಗಳಿಂದ ಆ ನಾಲೆಯ ಮಧ್ಯದಲ್ಲಿ ಎಲ್ಲಾ ಕಡೆ ಅಗೆದುಕೊಂಡು ಹೋಗಿದ್ದಾರೆ. ಆ ಮಧ್ಯ ಸ್ಯಾಲ್‌ಒಂದು ಸಣ್ಣ ಬಿಟ್ ಉಳಿದಿದೆ, ಹೈ ಕೋರ್ಟಿಗೆ ಹೋದರು, ಹೈ ಕೋರ್ಟ್‌ನಲ್ಲಿ ರದ್ದಾಯಿತು. ಅವರ ಪರವಾಗಿ ಆಗಿಲ್ಲ. ಹಿಂದಿನ ನೀರಾವರಿ ಮಂತ್ರಿಗಳು ಸ್ಟೇ ಯನ್ನು ತೆಗೆದುಕೊಂಡರು, ಸ್ಟೇ ಯನ್ನು ಮೂರೇ ದಿನಕ್ಕೋ ಎರಡು ದಿನಕ್ಕೋ-24 ಗಂಟೆಗಳಲ್ಲಿ ಆ ಸ್ಟೇಯನ್ನು ವೇಕೇಟ್ ಮಾಡಿದರು. ಮಾಜಿ ಮುಖ್ಯ ಮಂತ್ರಿಗಳು ಇಲ್ಲಿಯೇ ಕುಳಿತಿದ್ದಾರೆ, ನನ್ನ ಹತ್ತಿರ ಬಂದರು ನಾನು ಅದನ್ನು ತರಿಸಿ ನೋಡಿದೆ, ಇದು ಸಾಧ್ಯವಾಗುವುದಿಲ್ಲ. ಆದರೆ ಅವರು ಹತಮಾರಿತನ ಮಾಡಿ

ನಾವು ನಾಲೆಯನ್ನು ಬೇರೆ ಕಡೆ ಬದಲಾವಣೆ ಮಾಡಲಿಕ್ಕೆ ಆಗುವುದಿಲ್ಲ. ಅಲ್ಲಿ ಹೋಗಿ ಕೆಲಸ ಮಾಡಕೂಡದು ಎಂದು ಅಡೆತಡೆ ಮಾಡಲಿಕ್ಕೆ ಹೋಗಿದ್ದಾರೆ, ಅಧಿಕಾರಿಗಳು ವಿನಯದಿಂದ ಹೇಳಿದ್ದಾರೆ ನಾನು ಜೈಲಿಗೆ ಹೋಗುತ್ತೇನೆಂದ ಹಠಮಾಡಿಕೊಂಡು ಕುಳಿತುಕೊಂಡರೆ. ಹೋಗಿಯಪ್ಪ ಎಂದು ನಿನ್ನನ್ನೇ ಹೇಳಿದರು. ನಾನು ಹೋಗುವುದಿಲ್ಲವೆಂದರು. ಕುಳಿತಿದ್ದಾರೆ ಇವತ್ತು ಬೆಳಗ್ಗೆ ವಿತ್ ಡ್ರಾ ಮಾಡಿ ಗೌರ್ನಮೆಂಟ್ ಆರ್ಡರ್‌ನ್ನು ವಿತ್ ಡ್ರಾ ಮಾಡುತ್ತೇವೆ, ಆ ಎಫ್.ಐ.ಆರ್.ನ್ನು ವಿತ್‌ಡ್ರಾ ಮಾಡುತ್ತೇವೆ ನೀವು ಏನು ಅದರ ಒಳಗಡೆ ಪ್ರವೇಶ ಮಾಡಬೇಡಿ ಎಂದರೆ ಕೇಳದೇ ಕುಳಿತುಕೊಳ್ಳುತ್ತೇವೆಂದರೆ ನಾವು ಏನು ಮಾಡುವುದಕ್ಕೆ ಆಗುವುದಿಲ್ಲ. Government has taken a decision not to file F.I.R.

ಅವರ ಮೇಲೆ ಅದೂ ಹಾಕಬೇಡಿ ಎಂದು ಹೇಳಿದ್ದೇವೆ. ಇನ್ನೇನು ಮಾಡಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಬಿಟ್ಟು ಬಿಡಿ ಎಂದು ಅಷ್ಟೆ. ಅಲ್ಲ ಜಾಮೀನು ಕೊಡಿ ಎಂದರು, ಅದಕ್ಕೆ..

ಶ್ರೀ ಹೆಚ್.ಡಿ. ದೇವೇಗೌಡ : ನನ್ನದೇ ಕಾರನ್ನು ಕಳುಹಿಸುತ್ತೇನೆ, ನೀವೇ ಅವರನ್ನು ಕರೆದುಕೊಂಡು ಹೋಗಿ ಅವರ ಊರಿಗೆ ಬಿಟ್ಟು ಬನ್ನಿ ಅಷ್ಟೆ.

(ಊ) ದಿನಾಂಕ. 10-8-95ರಂದು ಪುಣಜನೂರಿನಲ್ಲಿ ದಂತಚೋರ ವೀರಪ್ಪನಿಂದ 11 ಜನರ ಕೊಲೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರವೂ ಸೇರಿದಂತೆ 10-8-1995ರಂದು ಕಾಡುಗಳ್ಳ ದಂತಚೋರ ವೀರಪ್ಪನ್ ಪುಣಜನೂರಿನಲ್ಲಿ ಹಾಗೂ ದೇಡುಗುಲಿಯಲ್ಲಿ ಒಟ್ಟು 11 ಜನರನ್ನು ಕೊಂದು, ಇಡೀ ಪ್ರದೇಶದ ಜನರು ಭಯಭೀತಿಯಿಂದ ಅತ್ಯಂತ ಕಂಗಾಲಾಗಿದ್ದಾರೆ. ಈ ಪರಿಸ್ಥಿತಿ,